# ದಿವಾನರೇ ಸ್ವಚ್ಛತೆಯ ಕಾರ್ಯಕ್ಕೆ ಇಳಿದಾಗ

ಮೂಲ ಹಿಂದೀ: **ಸ್ವಾಮಿ ಜಪಾನಂದ**

ಕನ್ನಡಕ್ಕೆ : **ರೂಪಶ್ರೀ ನಾಗರಾಜ್**

ಗುಜರಾತ್ ಪ್ರಾಂತ್ಯದಲ್ಲಿ ಸಚಿನ್ ಎನ್ನುವುದು ಒಂದು ಸಣ್ಣ ಪ್ರದೇಶ. ಸುಂದರವಾದ ಸ್ಥಳ. ನಾಲ್ಕೂ ಕಡೆ ಹಸಿರಿನ ಸಿರಿ ಕಂಗೊಳಿಸುವ ದೃಶ್ಯ, ಶಾಂತವಾಗಿಯೂ ಆಕರ್ಷಕವಾಗಿಯೂ ಇದೆ. ಪರಿವ್ರಾಜಕ ಸಂನ್ಯಾಸಿ ಸುತ್ತಾಡುತ್ತಾ ಸೂರತ್‌ಗೆ ಹೋಗಿದ್ದನು. ಅಲ್ಲಿ ಅವನ ಆರೋಗ್ಯ ಸ್ವಲ್ಪ ಬಿಗಡಾಯಿಸಿತು. ಒಂದು ಶಿವಮಂದಿರದಲ್ಲಿ ವಿಚಾರಮಗ್ನನಾಗಿ ಕುಳಿತಿದ್ದ. ಆಗ ಒಬ್ಬ ಸೌಮ್ಯ ಸ್ವಭಾವದ ಗೌಡ ಬ್ರಾಹ್ಮಣರು ಅಲ್ಲಿಗೆ ಬಂದರು. ಶಿವ ಪೂಜೆಯ ಬಳಿಕ ಹತ್ತಿರ ಬಂದು ಸಂನ್ಯಾಸಿಗೆ ನಮಸ್ಕರಿಸಿ ಬಹಳ ಪರಿಚಿತರಂತೆ ಕುಶಲವನ್ನು ವಿಚಾರಿಸಿದರು. ಸಂನ್ಯಾಸಿಗಂತೂ ಅವರೊಬ್ಬ ತುಂಬಾ ಆತ್ಮೀಯರೇನೋ ಎನ್ನುವ ಭಾವನೆ ಉಂಟಾಯಿತು. ಹೀಗೆ ಮಾತುಕತೆ, ಸತ್ಸಂಗ ನಡೆಯುತ್ತಲಿತ್ತು. ಭಿಕ್ಷೆಯ ಸಮಯವಾಯಿತು. ಬ್ರಾಹ್ಮಣರು ಕೇಳಿದರು, ‘‘ಇಂದಿನ ನಿಮ್ಮ ಭಿಕ್ಷೆಗೆ ಏನು ವ್ಯವಸ್ಥೆ ಆಗಿದೆ?’’ ಎಂದು. ಉತ್ತರವಾಗಿ ‘‘ಏನೂ ಇಲ್ಲ, ಉಂಛವೃತ್ತಿಯನ್ನೇ ಮಾಡಬೇಕು’’ ಎಂದುದನ್ನು ಕೇಳಿ, ಅವರು ತಕ್ಷಣ ಸಂತೆಗೆ ಹೋಗಿ ಸ್ವಲ್ಪ ಹಣ್ಣು, ಸಿಹಿತಿಂಡಿ ತಿನಿಸುಗಳನ್ನು ತಂದರು. ಸಂನ್ಯಾಸಿಯು ಆಹಾರವನ್ನು ಸ್ವೀಕರಿಸುತ್ತಿರುವಾಗ ಬ್ರಾಹ್ಮಣರು ತಮ್ಮ ಗ್ರಾಮವಾದ ಸಚಿನ್‌ಗೆ ತೆರಳಿ ಅಲ್ಲಿ ಸ್ವಲ್ಪ ದಿನ ತಂಗಿದ್ದು, ಆರೋಗ್ಯ ಸುಧಾರಿಸಿಕೊಳ್ಳಬೇಕೆಂದು ನಿವೇದಿಸಿಕೊಂಡರು. ‘‘ಸಚಿನ್ ಹತ್ತಿರವೇ ಇದೆ, ಆರೋಗ್ಯಕರವಾದ ಸ್ಥಳ, ನಡೆಯಿರಿ.. ನಿಮ್ಮ ಆರೋಗ್ಯ ಖಂಡಿತ ಅಲ್ಲಿ ಸುಧಾರಿಸುತ್ತದೆ. ನಮಗೂ ಅಲ್ಲಿ ಸ್ವಲ್ಪ ಸತ್ಸಂಗ ದೊರೆಯುತ್ತದೆ. ನನ್ನ ಒಬ್ಬಳು ಸೋದರಿ ಇದ್ದಾಳೆ. ದಿನ-ರಾತ್ರಿ ಪೂಜೆ ಪುನಸ್ಕಾರ ಎಂದು ಮಾಡುತ್ತಲೇ ಇರುತ್ತಾಳೆ. ಅವಳು ನಿಮ್ಮ ಸೇವೆ ಮಾಡುತ್ತಾಳೆ. ನಿಮ್ಮ ಉಪದೇಶದಿಂದ ಅವಳಿಗೂ ಲಾಭವಾಗುತ್ತದೆ. ಅವಳು ತುಂಬಾ ಪ್ರಶ್ನೆಗಳನ್ನು ಕೇಳುತ್ತಾಳೆ. ಆದರೆ ನನಗಂತೂ ಏನೂ ತಿಳಿದಿಲ್ಲ ಮತ್ತು ಅಲ್ಲಿ ಯಾವುದೇ ಸಂತರ ಅಥವಾ ಮಹಾತ್ಮರ ಆಶ್ರಮವೂ ಇಲ್ಲ. ಹಾಗಾಗಿ ನಾವು ಆಧ್ಯಾತ್ಮಿಕ ಜ್ಞಾನವನ್ನು ಪಡೆದು ಆತ್ಮಶಾಂತಿಯನ್ನು ಪಡೆಯಲು ಸಾಧ್ಯವಿಲ್ಲ. ನಡೆಯಿರಿ, ಒಂದು ಐದು ಹತ್ತು ದಿನಗಳು, ಅಥವಾ ಎಷ್ಟು ದಿನ ನಿಮಗೆ ಬೇಕೋ ಅಷ್ಟು ದಿನ ಅಲ್ಲಿ ಇರಿ. ನಮ್ಮ ಮನೆ ನಗರದಿಂದ ಹೊರಗಿದೆ, ಆಶ್ರಮದಂತೆಯೇ ಇದೆ. ನಿಮಗೆ ತುಂಬ ಇಷ್ಟವಾಗುತ್ತದೆ.. ’’ ಹೀಗೆಲ್ಲ ನಿವೇದಿಸಿಕೊಂಡರು.

ಸಂನ್ಯಾಸಿಯು ಒಪ್ಪಿ ತಕ್ಷಣ ಅವರೊಂದಿಗೆ ಹೊರಟ. ಬ್ರಾಹ್ಮಣರು ತುಂಬಾ ಪ್ರೀತಿಯಿಂದ ಸಂನ್ಯಾಸಿಯ ಕಂಬಳಿ ಮತ್ತು ಕಮಂಡಲುವನ್ನು ತೆಗೆದುಕೊಂಡು ಹೊರಟರು. ಗಾಡಿ ಬಂದ ಕೂಡಲೇ ಇಬ್ಬರೂ ಟಿಕೆಟ್ ತೆಗೆದುಕೊಂಡು ಕುಳಿತರು ಮತ್ತು



ಬೇರೆ ಬೇರೆ ಚರ್ಚೆಗಳಲ್ಲಿ ಮಗ್ನರಾದರು. ರೈಲುಗಾಡಿಯು ಸುಮಾರು ಸಂಜೆಯ ಹೊತ್ತಿಗೆ ಸಚಿನ್ ತಲುಪಿತು. ಮನೆಗೆ ತಲುಪಿದಾಗ ಮನೆಯವರೆಲ್ಲರೂ ಬಹಳ ಸಂತೋಷಪಟ್ಟರು ಮತ್ತು ಎದುರಿನ ಒಂದು ಒಳ್ಳೆಯ ಕೊಠಡಿಯಲ್ಲಿ ಸಂನ್ಯಾಸಿಗೆ ಉಳಿದುಕೊಳ್ಳುವ ವ್ಯವಸ್ಥೆ ಮಾಡಿದರು. ಇಡೀ ಮನೆಯ ವಾತಾವರಣ ಸಾತ್ತ್ವಿಕತೆಯ ಪ್ರತೀಕವಾಗಿತ್ತು. ಸಂನ್ಯಾಸಿಗಂತೂ ಅದೊಂದು ಋಷಿಗಳ ಆಶ್ರಮದಂತೆ ಭಾಸವಾಗಿ ಮನಸ್ಸಿಗೆ ಬಹಳ ಪ್ರಸನ್ನತೆ ಉಂಟಾಯಿತು.

ರಾತ್ರಿ ಬಹಳ ಹೊತ್ತಿನವರೆಗೂ ಸತ್ಸಂಗ ನಡೆಯಿತು. ಬ್ರಾಹ್ಮಣ ಮತ್ತು ಸಂನ್ಯಾಸಿ ಇಬ್ಬರೂ ಅದೇ ಕೊಠಡಿಯಲ್ಲಿ ಮಲಗಿದರು. ಸಂನ್ಯಾಸಿ ಕೇಳಿದ, ‘‘ನನಗೆ ಬೆಳಗ್ಗೆ ಬೇಗನೆ ಏಳುವ ಅಭ್ಯಾಸ. ಹಾಗಾಗಿ ಒಂದು ಬಕೆಟ್ ಮತ್ತು ಹಗ್ಗ ಇಟ್ಟುಬಿಡಿ, ಬಾವಿಯಿಂದ ನೀರು ಸೇದಿ ಸ್ನಾನ ಮುಗಿಸುತ್ತೇನೆ. ಬೆಳಗ್ಗೆ ಯಾರನ್ನೂ ಕೇಳುವ ಆವಶ್ಯಕತೆ ಇರುವುದಿಲ್ಲ.’’ ಬ್ರಾಹ್ಮಣರು ನಕ್ಕು, ‘‘ಅರೆ, ಬೆಳಿಗ್ಗೆ ಎಷ್ಟು ಹೊತ್ತಿಗೆ ಬೇಕು? ನನ್ನ ತಂಗಿಯಂತೂ ಪ್ರತಿದಿನ ೩-೪ ಗಂಟೆಗೇ ಏಳುತ್ತಾಳೆ. ಸ್ನಾನ ಮಾಡಿ ಪೂಜೆಗೆ ಕೂಡುತ್ತಾಳೆ. ನಿಮಗೆ ನೀರು ತಯಾರಿರುತ್ತದೆ, ಸೇದುವುದು ಏನೂ ಬೇಡ. ನಿಶ್ಚಿಂತರಾಗಿ ಮಲಗಿ’’ ಎಂದರು. ಅವರ ಸೋದರಿ ಬೆಳಿಗ್ಗೆ ಎದ್ದು ನೀರು ತುಂಬಿದ್ದಳು. ಸಂನ್ಯಾಸಿ ಎದ್ದು ಹೊರಬಂದಾಗ ಎಲ್ಲವೂ ಸಿದ್ಧವಾಗಿತ್ತು.

ಸಂನ್ಯಾಸಿಯು ಚಹಾ ಕುಡಿದು ಹತ್ತಿರದ ರಸ್ತೆಯಲ್ಲಿ ಸ್ವಲ್ಪ ಸುತ್ತಾಡಲು ಹೊರಟ. ಗೃಹಸ್ಥ ಆರಾಮವಾಗಿ ತನ್ನ ಬೆಳಗಿನ ಕೆಲಸಗಳನ್ನು ಮಾಡಿಕೊಳ್ಳಲಿ ಎಂಬ ಉದ್ದೇಶವೂ ಅವನದಾಗಿತ್ತು. ರಸ್ತೆ ಸುಂದರವಾಗಿತ್ತು. ಆದರೆ ಎರಡೂ ಕಡೆ ದೂರದವರೆಗೂ ಒಂದು ರೀತಿಯ (ಗುಬ್ಬಳಿ) ಜಾಲಿ ಮರಗಳು ಇದ್ದವು. ಸಣ್ಣ ಸಣ್ಣ

ಮುಳ್ಳುಗಳು ಮತ್ತು ಜಾಲಿ ಮರದ ಸಣ್ಣ ಹಳದಿ ಹೂಗಳು ರಸ್ತೆಯಲ್ಲಿ ಹರಡಿದ್ದವು. ಬರಿಗಾಲಿನಲ್ಲಿ ನಡೆಯುವುದು ಕಠಿಣವಾಗಿತ್ತು. ನೋಡುತ್ತಿದ್ದಂತೆ ದೂರದ ಹಳ್ಳಿಯಿಂದ ತರಕಾರಿಯವರು, ಹಾಲಿನವರು, ಕೆಳವರ್ಗದ ಸ್ತ್ರೀಪುರುಷರು ತಮ್ಮ ಕೆಲಸಗಳಿಗೆ ಬರುತ್ತಿದ್ದರು. ಅವರ ಕಾಲುಗಳಲ್ಲಿ ಚಪ್ಪಲಿಗಳೂ ಇರಲಿಲ್ಲ. ಅವರುಗಳು ಬಹಳ ಕಷ್ಟದಿಂದಲೇ ಈ ಜಾಲಿಯ ಮುಳ್ಳುಗಳನ್ನು ದಾಟಿ ಹೋಗುತ್ತಿದ್ದರು. ಮುಳ್ಳುಗಳು ಚುಚ್ಚುತ್ತಿದ್ದವು, ಅವರು ಅದನ್ನು ತೆಗೆದು ಬಿಸಾಡಿ ಮುಂದೆ ಹೋಗುತ್ತಿದ್ದರು. ಇನ್ನೇನು ಮಾಡುತ್ತಾರೆ ಪಾಪ!

ಸಂನ್ಯಾಸಿಗೆ ಬಹಳ ದುಃಖವಾಯಿತು. ಸಾಮಾನ್ಯವಾಗಿ ಎಲ್ಲರೂ ಓಡಾಡುವ ಹಾದಿಯಲ್ಲಿ ಈ ರೀತಿಯ ಮುಳ್ಳಿರುವ ಜಾಲಿ ಮರ ಅಥವಾ ಇನ್ಯಾವುದಾದರೂ ಮುಳ್ಳಿರುವ ಮರಗಳನ್ನು ಹಾಕಬಾರದು; ಈ ಮುಳ್ಳಿರುವ ಮರಗಳನ್ನಂತೂ ವಿಶೇಷವಾಗಿ ಆಲಂಕಾರಿಕವಾಗಿ ಹಾಕಲಾಗಿತ್ತು. ಇದೆಂತಹ ಬುದ್ಧಿವಂತಿಕೆ ಎಂದುಕೊಂಡ. ಹತ್ತಿರದಲ್ಲಿ ಒಂದು ಪುಟ್ಟ ಖರ್ಜೂರದ ಮರ ಕಾಣಿಸಿತು. ಅದರದೇ ಒಂದು ಎಲೆಯನ್ನು ಕಿತ್ತು, ಪೊರಕೆಯಂತೆ ಮಾಡಿಕೊಂಡು ರಸ್ತೆಯ ಮಧ್ಯಭಾಗವನ್ನು ಗುಡಿಸಲು ಪ್ರಾರಂಭಿಸಿದ ಸಂನ್ಯಾಸಿ. ಯಾರು ನೋಡಿದರೂ ನಕ್ಕು ಮುಂದೆ ಹೋಗುತ್ತಿದ್ದರು. ಆದರೆ ಸಂನ್ಯಾಸಿ ಬಹಳ ಕಷ್ಟಪಟ್ಟು ಮುಳ್ಳುಗಳನ್ನು ಬದಿಗೆ ಸರಿಸುತ್ತಿದ್ದ. ಎರಡೂ ಬದಿಯದು ಸೇರಿ ಸುಮಾರು ೨೦೦ ಜಾಲಿ ಮರಗಳು ಇದ್ದವು.

ಅಷ್ಟರಲ್ಲೇ ಒಬ್ಬ ಪ್ರೌಢ ಗುಜರಾತಿ ವ್ಯಕ್ತಿಯು ಅಲ್ಲಿಗೆ ಬಂದು ಕೇಳಿದರು, ''ಏನು ಮಾಡುತ್ತಿದ್ದೀರಿ ಸ್ವಾಮಿ? ''

''ಏನಿಲ್ಲ , ಈ ಮುಳ್ಳುಗಳು ಜನರಿಗೆ ತುಂಬಾ ಕಷ್ಟ ಕೊಡುತ್ತವೆ. ಸ್ವಲ್ಪ ಬದಿಗೆ ಸರಿಸುತ್ತಿದ್ದೇನೆ.''

''ಆದರೆ ಮರವನ್ನು ಕಡಿಯಬಾರದಲ್ಲ, ಹಾಗಾಗಿ ಹೀಗೆ ಆಗುತ್ತಲೇ ಇರುತ್ತದೆ.''

''ಹೌದು. ಮರ ನೆಟ್ಟವರು ಬಹಳ ಬುದ್ಧಿವಂತರು. ರಸ್ತೆಯ ಎರಡೂ ಬದಿಯಲ್ಲಿ ಮುಳ್ಳಿರುವ ಮರಗಳನ್ನು ಹಾಕಿದ್ದಾರೆ. ಅವರಿಗೆ ಹೊಳೆದೇ ಇಲ್ಲ , ಇಲ್ಲಿ ಸಾವಿರಾರು ಬಡ ಜನರಿದ್ದಾರೆ, ಅವರಿಗೆ ಚಪ್ಪಲಿಗಳೂ ಇರುವುದಿಲ್ಲ ಎಂದು. ಸಾಹೇಬರ ಧ್ಯಾನವನ್ನು ಇಲ್ಲಿಗೆ ಎಳೆಯಲೇಬೇಕು. ಕನಿಷ್ಠ ಬೆಳಗಿನ ಒಂದು ಹೊತ್ತಾದರೂ ಗುಡಿಸುವವನು ಬಂದು ಈ ಜಾಗವನ್ನು ಶುಚಿ ಮಾಡಿ ಹೋಗಬಹುದು. ಮಧ್ಯದ ಭಾಗವನ್ನು ಬಾಚಿ ಶುಚಿ ಮಾಡುವುದರಿಂದ ಸ್ವಚ್ಛವಾಗುತ್ತದೆ, ಜನರಿಗೂ ಉಪಕಾರವಾಗುತ್ತದೆ.

''ಹೌದು ಇದು ಸಾಧ್ಯ, ಅದೇನೂ ದೊಡ್ಡ ವಿಷಯವಲ್ಲ, ಮಾಡೋಣ. ಸ್ವಾಮಿ ಈ ಪೊರಕೆ ಸ್ವಲ್ಪ ನನಗೆ ಕೊಡಿ, ನಾನೂ ಪ್ರಯತ್ನಿಸುತ್ತೇನೆ.'' ಸಂನ್ಯಾಸಿಯ ಕೈಯಿಂದ ಅವರು ಖರ್ಜೂರದ ಪೊರಕೆಯನ್ನು ತೆಗೆದುಕೊಂಡು ಸ್ವಲ್ಪ ದೂರದವರೆಗೆ ಗುಡಿಸುತ್ತಾ ಮುಳ್ಳುಗಳನ್ನು ಬದಿಗೆ ಸರಿಸುತ್ತಿದ್ದರು.

ಆದರೆ ಈಗ ಜನರು ಇದನ್ನು ನೋಡಿ ನಗಲಿಲ್ಲ. ಬದಲಿಗೆ ಗೌರವಪೂರ್ವಕವಾಗಿ ವಿಸ್ಮಿತರಾಗಿ ಸದ್ದಿಲ್ಲದೆ ಹೊರಟು ಹೋಗುತ್ತಿದ್ದರು. ಆದರೆ ಯಾರೂ ಕೂಡ 'ನಮಗೆ ಕೊಡಿ, ಶುಚಿ ಮಾಡುತ್ತೇವೆ' ಎಂದು ಹೇಳಲಿಲ್ಲ. ಅವರೆಲ್ಲ ಕೆಲಸಕ್ಕೆ ಹೋಗುತ್ತಿದ್ದರು. ಸಮಯಕ್ಕೆ ಸರಿಯಾಗಿ ಸಂತೆಯನ್ನು ತಲುಪುವುದು ಅವರ ಉದ್ದೇಶವಾಗಿತ್ತು.

ಸಂನ್ಯಾಸಿಯು ಇವರೊಬ್ಬ ಪ್ರತಿಷ್ಠಿತ ವ್ಯಕ್ತಿ ಎಂದು ಅರಿತ. ಸ್ವಲ್ಪ ಸಮಯವಾದ ಮೇಲೆ ಆ ಮಹಾಶಯರು, ''ನೀವು ಎಲ್ಲಿ ಉಳಿದುಕೊಂಡಿದ್ದೀರಿ, ಯಾವಾಗ ಬಂದಿರಿ'' ಎಂದು ವಿಚಾರಿಸಿದರು. ಹಿಂದಿನ ರಾತ್ರಿಯೇ ಬಂದು ಗೌಡ ಬ್ರಾಹ್ಮಣರಲ್ಲಿ ಉಳಿದುಕೊಂಡಿದ್ದೇನೆ ಎಂಬ ಸಂನ್ಯಾಸಿ ಉತ್ತರ ಕೇಳಿದಾಗ, ''ಹೌದು ಒಳ್ಳೇದಾಯ್ತು. ಗೌಡ ಬ್ರಾಹ್ಮಣರು ಒಳ್ಳೆಯ ಮನುಷ್ಯ, ಧರ್ಮನಿಷ್ಠರು. ಸರಿ, ಈಗ ನನ್ನ ಮನೆಗೆ ನಡೆಯಿರಿ. ಹತ್ತಿರದಲ್ಲೇ ಐದಾರು ನಿಮಿಷದ ರಸ್ತೆ ಅಷ್ಟೇ'' ಎಂದರು. ಸಂನ್ಯಾಸಿ ಜೊತೆಗೆ ಹೊರಟ. ತುಂಬಾ ಮಾತುಗಳನ್ನಾಡುತ್ತಾ ಬಂದರು. ಮನೆ ತಲುಪಿದಾಗ ಅಲ್ಲಿದ್ದ ಚೌಕಿದಾರನೊಬ್ಬ ಸಲಾಂ ಹೊಡೆದು ಎದ್ದು ನಿಂತ. ಹೊರಗೆ ಒಂದು ಫಲಕ ತೂಗಾಡುತ್ತಿತ್ತು, 'ದಿವಾನ ಸಾಹೇಬರು, ಸಚಿನ್ ರಾಜ್ಯ' ಎಂದು.

ದಿವಾನರು ಸಂನ್ಯಾಸಿಯನ್ನು ಗೌರವಪೂರ್ವಕವಾಗಿ ಕುಳ್ಳಿರಿಸಿ ಚಹಾ ತರಿಸಿದರು ಮತ್ತು ಹೇಳಿದರು, ''ಸ್ವಾಮಿ, ಇವತ್ತು ನಿಮ್ಮಿಂದ ನನಗೆ ಜೀವನದ ಒಂದು ಒಳ್ಳೆಯ ಪಾಠ ಕಲಿತಂತಾಯಿತು. ನಾನು ಪ್ರತಿದಿನ ಸುತ್ತಾಡಲು ಅಲ್ಲಿಗೆ ಹೋಗುತ್ತೇನೆ, ಆದರೆ ಈ ವಿಷಯ ನನಗೆ ಹೊಳೆದಿರಲೇ ಇಲ್ಲ. ನೋಡಿಯೂ ನೋಡದಂತಿದ್ದೆ. ಆದ್ದರಿಂದಲೇ ಸಂತರ ಸಾನ್ನಿಧ್ಯ ಇರಬೇಕು ಎಂದು ಹಿರಿಯರು ಹೇಳುವುದು. ಇಂದು ನನಗೆ ತುಂಬಾ ಖುಷಿಯಾಗುತ್ತಿದೆ, ನನ್ನ ಕೈಗಳಿಂದ ಸ್ವಲ್ಪ ಸೇವೆಯಾಯಿತು. ಅದೂ ಎಂತಹ ಸೇವೆ ಎಂದರೆ ನಾವು ಯಾವತ್ತೂ ಕಲ್ಪನೆ ಮಾಡದಿರುವ ಸೇವೆ.''

ಹತ್ತಿರದಲ್ಲಿ ಕಚೇರಿ ಇತ್ತು. ಅಲ್ಲಿಂದ ಸಾಹೇಬರು ಬಂದರು. ಆಗ ದಿವಾನರು ಎಲ್ಲವನ್ನೂ ವಿವರಿಸಿದರು. ಸಾಹೇಬರು ''ಹೌದು, ಸರಿಯಾದ ಮಾತು. ಜನರಿಗೆ ಬಹಳ ಕಷ್ಟವಾಗುತ್ತಿರಬಹುದು. ಹಾಗಾಗಿ ಎರಡೂ ಹೊತ್ತು ಯಾರನ್ನಾದರೂ ಕಳಿಸಿ ಶುಚಿ ಮಾಡಿಸಿ. ಇದರ ಬಗ್ಗೆ ಹುಕುಂ ಮಾಡಿಬಿಡಿ'' ಎಂದು ಹೇಳಿ, ಸಂನ್ಯಾಸಿಗೆ ನಮಸ್ಕರಿಸಿ ಹೊರಟು ಹೋದರು.

ದಿವಾನ ಸಾಹೇಬರು ಸತ್ಸಂಗೀ ಬ್ರಾಹ್ಮಣರಾಗಿದ್ದರು. ಪ್ರತಿದಿನ ಬೆಳಿಗ್ಗೆ ಅದೇ ದಾರಿಯಲ್ಲಿ ಸಂನ್ಯಾಸಿಯನ್ನು ಭೇಟಿಯಾಗುತ್ತಿದ್ದರು ಮತ್ತು ಇಬ್ಬರೂ ಸತ್ಸಂಗ ಮಾಡುತ್ತಾ ದೂರದವರೆಗೂ ನಡೆದುಕೊಂಡು ಹೋಗಿ ವಾಪಸ್ ಆಗುತ್ತಿದ್ದರು.

ಎಲ್ಲಿ ಧಾರ್ಮಿಕ ಭಾವನೆ ಇರುತ್ತದೆಯೋ ಅಲ್ಲಿ ಮಾನವೀಯತೆಯೂ ನಿಃಸ್ಸಂದೇಹವಾಗಿ ಇರುತ್ತದೆ.